


ಸಂದರ್ಭಗಳಿಗೆ ಅನುಸಾರವಾದ ಮಿತಿ ಇರುತ್ತವೆ. ಹಾಗಂತ ಚಿಂತೆ ಮಾಡಬಾರದು. ಆ ಮಿತಿಯ ಒಳಗೆ ಎಷ್ಟು ಮತ್ತು ಹೇಗೆ ಸೃಜನಶೀಲ ಅಭಿವ್ಯಕ್ತಿ ಸಾಧ್ಯ ಎಂಬುದನ್ನು ಗಮನಿಸುವುದು ಮುಖ್ಯ. ನನ್ನ ಸಿನಿಮಾ ಸಾಹಿತ್ಯದಲ್ಲಿ ಇಂತಹ ಪ್ರಯತ್ನಗಳನ್ನು ಮಾಡುತ್ತಿರುತ್ತೇನೆ. ಮೃದುಭಾವದ ಹಾಡುಗಳಿಂದ ಹಿಡಿದು, ರ್‍ಯಾಪ್ ಹಾಡುಗಳವರೆಗೂ ರಚನೆಯಲ್ಲಿ ಹೊಸತನ ಪಯತ್ನಿಸುತ್ತಲೇ ಬಂದಿದ್ದೇನೆ. ಕಾಸರಗೋಡು, ತಿರುವನಂತಪುರ ಮುಂತಾದ ಕಡೆಗಳ ಭಾಷಾಶೈಲಿಯ ಹಾಡುಗಳನ್ನೂ ರಚಿಸಿದ್ದೇನೆ.

ದುರಿತ ಕಾಲದಲ್ಲಿ ಬರಹಗಾರರು, ಕವಿಗಳು ಒಗ್ಗಟ್ಟಾಗಿ ನಿಲ್ಲುವುದನ್ನು ನಾನು ತೀವ್ರವಾಗಿ ಬಯಸುವವನು. ಅದು ನನ್ನ ಅಂತರಾಳದ ತುಡಿತವೂ ಹೌದು. ಯಾವುದೇ ಸಾಮಾಜಿಕ ಘಟನೆಗಳಿಗೆ ಸ್ಪಂದಿಸುವಾಗ, ಯಾವುದಾದರೂ ಬರಹಗಾರರಿಗೆ ಬೆದರಿಕೆ, ದಾಳಿಗಳಾಗುವಾಗ ಸರಿದು ನಿಲ್ಲುವ ಬದಲು ಒಗ್ಗಟ್ಟಿನಲ್ಲಿ ನಿಲ್ಲಬೇಕಾದ ಅನಿವಾರ್ಯತೆ ಇದೆ. ನಮಗೂ ಬೆದರಿಕೆಗಳು ಬರುತ್ತವೆ. ಹೋರಾಟಗಳಲ್ಲಿಯೂ ತೊಡಗಿಸಿಕೊಂಡಿರುವುದರಿಂದ ನಮ್ಮನ್ನು ಗುರಿ ಮಾಡಲಾಗುತ್ತಿದೆ. ಕೇರಳ ಸರ್ಕಾರ ಸ್ವಲ್ಪಮಟ್ಟಿಗೆ ಪ್ರಬಲ ಆಗಿರುವುದರಿಂದ ಇತರ ರಾಜ್ಯಗಳಂತೆ ತೀವ್ರ ಸ್ವರೂಪದ ಘಟನೆಗಳು ನಡೆಯುವುದಿಲ್ಲ. ಯಾರೂ ಮುಂದೆ ನಿಂತು, ಬಹಿರಂಗವಾಗಿ ಬೆಂಬಲ ಸೂಚಿಸುವುದಿಲ್ಲ. ಆದರೆ ಕೆಲವು ನಾಯಕರು ಕರೆ ಮಾಡಿ, ತೆರೆಮರೆಯಲ್ಲಿ ಬೆಂಬಲ ನೀಡುತ್ತಾರೆ.

ವಿಚಾರವಾದಿಗಳನ್ನು, ಚಿಂತಕರನ್ನು ಗುರಿಯಾಗಿಸುವುದರಲ್ಲಿ, ಅವರಿಗೆ ಬೆದರಿಕೆ ಒಡ್ಡುವುದರಲ್ಲಿ ಕೇರಳವೇನೂ ಹೊರತಲ್ಲ ಎಂಬುದು ಎಷ್ಟು ಸತ್ಯವೋ, ಕರ್ನಾಟಕವೂ ಸೇರಿ ಇತರ ರಾಜ್ಯಗಳಷ್ಟು ಹೆಚ್ಚಿಲ್ಲ ಎಂಬುದೂ ವಾಸ್ತವ. ಆದರೆ ಕೇರಳಕ್ಕೂ ಅಂತಹ ದಿನಗಳು ಬರಲು ಹೆಚ್ಚು ಸಮಯ ಬೇಕಿಲ್ಲ.

●